# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ

ನಂ. 09, 2ನೇ ಮಹಡಿ, 1ನೇ ಮುಖ್ಯರಸ್ತೆ, (ಹೊರವರ್ತುಲ ರಸ್ತೆ),ಕೆಂಗೇರಿ ಉಪನಗರ,ಬೆಂಗಳೂರು-60.

ಸಂಖ್ಯೆ : ಸ.ಇಂ/ವಾ-130/ವಾರ್ಡ್‌ಸಭೆ/2020-21 ದಿನಾಂಕ : 03/04/2021

## ವಾರ್ಡ್-130ರ ವಾರ್ಡ್ ಸಭೆಯ ನಡವಳಿ.

ದಿನಾಂಕ: 03/04/2021 ರಂದು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿಯ ನಡುವಳಿಗಳು

**ಸಭೆಯಲ್ಲಿ ಹಾಜರಿದ್ದ ಅಧಿಕಾರಿ ನೌಕರರು ಮತ್ತು ಸದಸ್ಯರುಗಳು:**

| ಕ್ರ ಸಂ | ಸದಸ್ಯರ ಹೆಸರು/ ಪದನಾಮ | ಪದನಾಮ | ದೂರವಾಣಿ ಸಂಖ್ಯೆ |
|---|---|---|---|
| 1 | ಶ್ರೀ ಮುತ್ತುರಾಜ್ | ಮುಖ್ಯ ಲೆಕ್ಕ ಪರಿಶೋಧನಾಧಿಕಾರಿಗಳು ನೋಡಲ್ ಅಧಿಕಾರಿ | 9880923954 |
| 2 | ಶ್ರೀ ಕೆ.ಎಂ. ಯಧುಕೃಷ್ಣ | ಸಹಾಯಕ ಇಂಜಿನಿಯರ್ ವಾರ್ಡ್-130 ಹಾಗೂ ಸದಸ್ಯ ಕಾರ್ಯದರ್ಶಿ | 9901050544 |
| 3 | ಶ್ರೀ ರಾಘವೇಂದ್ರ | ಸಹಾಯಕ ಅಭಿಯಂತರರುಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ | 9108027357 |
| 4 | ಶ್ರೀಮತಿ ರೂಪ ಎಂ | ಸಹಾಯಕ ಇಂಜಿನಿಯರ್ (ವಿ) ಆರ್.ಆರ್.ಬಡಾವಣೆ | 9449870366 |
| 5 | ಶ್ರೀ ನಾಗರಾಜು | ಕಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ | 9945886188 |
| 6 | ಶ್ರೀ. ಡಿ. ವಿನಯ್ | ಕಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ | 9880243077 |
| 7 | ಶ್ರೀ ಬಿ.ಪಿ. ಚಿಕ್ಕರಾಜು | ಸಂಚಾರಿ ಪೊಲೀಸ್ ಕೆಂಗೇರಿ ಪೊಲೀಸ್ ಠಾಣೆ | 9482088276 |
| 8 | ಶ್ರೀ **ಬೋ**ರಯ್ಯ | ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್ ಜ್ಞಾನಭಾರತಿ ಪೊಲೀಸ್ ಠಾಣೆ | 9945757556 |
| 9 | ಶ್ರೀ ಜಯರಾಂ | ವಾರ್ಡ್ ಕಮಿಟಿ ಸದಸ್ಯರು | 9845408277 |
| 10 | ಶ್ರೀ ಶಶಿಕುಮಾರ್ ಕೆ.ಆರ್ | ವಾರ್ಡ್ ಕಮಿಟಿ ಸದಸ್ಯರು | 9916183333 |

Scanned with CamScanner

| | | | |
|---|---|---|---|
| 11 | ಶ್ರೀ ಕದರಪ್ಪ ಎನ್ | ವಾರ್ಡ್ ಕಮಿಟಿ ಸದಸ್ಯರು | 9845796985 |
| 12 | ಶ್ರೀ ಜಿ.ಸತ್ಯ | ವಾರ್ಡ್ ಕಮಿಟಿ ಸದಸ್ಯರು | 9740785505 |
| 13 | ಶ್ರೀಮತಿ ಪ್ರೇಮ ಎನ್ | ವಾರ್ಡ್ ಕಮಿಟಿ ಸದಸ್ಯರು | 96845733617 |
| 14 | ಶ್ರೀಮತಿ ಸಬೀಹ ಅಂಜುಮ್ | ವಾರ್ಡ್ ಕಮಿಟಿ ಸದಸ್ಯರು | 9844239162 |
| 15 | ಶ್ರೀ ಬಸವರಾಜು ಓ.ಎಂ | ವಾರ್ಡ್ ಕಮಿಟಿ ಸದಸ್ಯರು | 9886181525 |
| 16 | ಶ್ರೀ ಶ್ರೀನಿವಾಸ್ ಮೂರ್ತಿ ವಿ | ವಾರ್ಡ್ ಕಮಿಟಿ ಸದಸ್ಯರು | 9845518763 |
| 17 | ಶ್ರೀ ಪ್ರಕಾಶ್ | ವಾರ್ಡ್ ಕಮಿಟಿ ಸದಸ್ಯರು | 8105878004 |
| 18 | ಶ್ರೀ ರಾಮು | ಗುತ್ತಿಗೆದಾರರು ಬೀದಿ ದೀಪ ನಿರ್ವಹಣೆ | 9164232782 |
| 19 | ಶ್ರೀ ಜಿ.ಮುನಿರಾಜು | ವಾರ್ಡ್ ಕಮಿಟಿ ಸದಸ್ಯರು | 9900595969 |
| 20 | ಶರಣಪ್ಪ ಅಂಗಡಿ | ವಾರ್ಡ್ ಕಮಿಟಿ ಸದಸ್ಯರು | 9880781644 |
| 21 | ಶ್ರೀ ಶ್ರೀಧರ್ ಮೂರ್ತಿ | ವಾರ್ಡ್ ಕಮಿಟಿ ಸದಸ್ಯರು | 9341444982 |
| 22 | ಶ್ರೀ ಅನಿಲ್ ಕುಮಾರ್ | ವಾರ್ಡ್ ಕಮಿಟಿ ಸದಸ್ಯರು | 9148844823 |

ವಾರ್ಡ್ ನಂ.130 ಉಲ್ಲಾಳ ವಾರ್ಡ್‌ನ ಸಹಾಯಕ ಇಂಜಿನಿಯರ್ ಹಾಗೂ ಸದಸ್ಯ ಕಾರ್ಯದರ್ಶಿಯವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿ ನೌಕರರು ಮತ್ತು ವಾರ್ಡ್ ಕಮಿಟಿ ಸದಸ್ಯರನ್ನು ಸ್ವಾಗತಿಸಿದರು.

ನೋಡಲ್ ಅಧಿಕಾರಿಗಳು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ವಾರ್ಡಿನ ವ್ಯಾಪ್ತಿಯಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು ಮತ್ತು ವಾರ್ಡ್ ಕಮಿಟಿ ಸದಸ್ಯರುಗಳಿಂದ ಮಾಹಿತಿ ಪಡೆದರು.

ಸಭೆಯಲ್ಲಿ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

(1) ಜ್ಞಾನಭಾರತಿ 1ನೇ ಹಂತ ಹಾಗೂ 2ನೇ ಹಂತದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಗೆ ಸಂಬಂಧಿಸಿದ ಸಹಾಯಕ ಅಭಿಯಂತರರಾದ ಶ್ರೀ ರಾಘವೇಂದ್ರ

Scanned with CamScanner

ರವರು ಸ್ಥಳಕ್ಕೆ ತೆರಳಿ ಶೀಘ್ರ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಹಾಜರಿದ್ದ ಸದಸ್ಯರು ಕೋರಿರುತ್ತಾರೆ.

ಅದರಂತೆ ಲಭ್ಯವಿರುವ ಕುಡಿಯುವ ನೀರಿನ ಆಧಾರಧ ಮೇಲೆ ಸಮಸ್ಯೆಯನ್ನು ಬಗೆಹರಿಸಲು ಕ್ರಮ ಕೈಗೊಳ್ಳುವುದಾಗಿ ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ.

(2) ಜ್ಞಾನಭಾರತಿ 1ನೇ ಹಂತದ ಸ್ಮಶಾನದ ಪಕ್ಕದಲ್ಲಿ ಗಿಡ ಗಂಟಿಗಳನ್ನು ಸ್ವಚ್ಚಮಾಡಿ ಡೆಬ್ರೀಸ್ ತೆಗೆಯಲು ನೋಡಲ್ ಅಧಿಕಾರಿಯವರು ಸಹಾಯಕ ಅಭಿಯಂತರರವರಿಗೆ ತಿಳಿಸಿರುತ್ತಾರೆ.

(3) ಆರ್.ಆರ್. ಬಡಾವಣೆಯಲ್ಲಿ ಸುಮಾರು 150 ಮೀಟರ್ ಚರಂಡಿ ನಿರ್ಮಾಣದ ಕಾಮಗಾರಿಯು ಬಾಕಿ ಉಳಿದ್ದು, ಅತೀ ಶೀಘ್ರವಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ತಿಳಿಸಲಾಗಿರುತ್ತದೆ.

(4) ಸಭೆಯಲ್ಲಿ ಹಾಜರಿದ್ದ ಶ್ರೀಯುತ ಸತ್ಯ ರವರು ಶಿವನಪಾಳ್ಯದಲ್ಲಿ ಒಂದು ಅಂಗನವಾಡಿ ಕೇಂದ್ರ ಕಟ್ಟಡ ಹಾಗೂ ಪ್ರಾರ್ಥಮಿಕ ಶಾಲಾ ಕಟ್ಟಡವನ್ನು ಈ ಸಾಲಿನ ಆಯವ್ಯದಲ್ಲಿ ಅಳವಡಿಸಿಕೊಂಡು ನಿರ್ಮಿಸಿಕೊಡಲು ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರಿಗೆ ತಿಳಿಸಿರುತ್ತಾರೆ. ಅನುದಾನ ದೊರೆತ ನಂತರ ಅಂದಾಜು ಪಟ್ಟಿಯನ್ನು ತಯಾರಿಸಿ ಅನುಮೋದನೆ ಪಡೆದು ನಿಯಮಾನುಸಾರ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳುವುದಾಗಿ ಸಹಾಯಕ ಅಭಿಯಂತರರು ತಿಳಿಸಿದರು.

(5) ಈಗಾಗಲೇ ವಾರ್ಡ್ ಸಂಖ್ಯೆ 130ರ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿರುವುದರಿಂದ ಟ್ಯಾಂಕರ್ ಅಳವಡಿಸಿಕೊಂಡು ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸರ್ವ ಸದಸ್ಯರು ಆಗ್ರಹಿಸಿರುತ್ತಾರೆ. ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

(6) ಗಾಂಧಿನಗರದ ಪಕ್ಕದಲ್ಲಿರುವ ವಾರ್ಡ್ ಸಂಖ್ಯೆ 130ರ ವ್ಯಾಪ್ತಿಗೆ ಬರುವ ಕೆರೆಗೆ ಸೇರಿದ ಜಾಗವನ್ನು ಒತ್ತುವರಿ ಮಾಡಿಕೊಂಡು ಕಟ್ಟ ನಿರ್ಮಾಣ ಮಾಡಿರುವವರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲು ತಿಳಿಸಲಾಗಿರುತ್ತದೆ.

(7) ಉಲ್ಲಾಳ ವಾರ್ಡ್ ಸಂಖ್ಯೆ 130ರ ವ್ಯಾಪ್ತಿಯಲ್ಲಿ ಕಳ್ಳತನ ಹಾಗೂ ಧೂಮಪಾನದೊಡನೆ ಗಾಂಜಾ ಸೇವಿಸುವವರ ವಿರುದ್ದ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಪೊಲೀಸ್ ಅಧಿಕಾರಿಗಳಿಗೆ ತಿಳಿಸಲಾಗಿರುತ್ತದೆ. ಆದುದರಿಂದ ಪೊಲೀಸ್ ಗಸ್ತು ಹೆಚ್ಚಿಸಿ ಕಾನೂನು ವಿರುದ್ದವಾಗಿ ನಡೆದುಕೊಳ್ಳುವವರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಅಧಿಕಾರಿಗಳು ತಿಳಿಸಿರುತ್ತಾರೆ.

Scanned with CamScanner

(8) ಮಾರುತಿನಗರ ಸರ್ವೆ ನಂ. 9 ಹಾಗೂ 17ರಲ್ಲಿ ಕುಡಿಯುವ ನೀರನ್ನು ಪೂರೈಸುವ ಸಲುವಾಗಿ ಹೊಸದಾಗಿ ಎರಡು ಕೊಳವೆ ಬಾವಿಗಳನ್ನು ಕೊರೆಸಲು ತಿಳಿಸಲಾಗಿರುತ್ತದೆ.

(9) ವಾರ್ಡ್ ನಂ.130ರ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಬೀದಿ ದೀಪಗಳನ್ನು ಸರಿಪಡಿಸಲು ಸಾರ್ವಜನಿಕರು ಸಭೆಯಲ್ಲಿ ಕೋರಿದರು. ಈ ವಿಷಯವಾಗಿ ನೋಡಲ್ ಅಧಿಕಾರಿಗಳು ಎಲೆಕ್ಟ್ರಿಕಲ್ ಗುತ್ತಿಗೆದಾರರಾದ ಶ್ರೀ ಜಯರಾಂ ರವರೊಂದಿಗೆ ಮಾತನಾಡಿ ತುರ್ತಾಗಿ ವಿದ್ಯುತ್ ಬೀದಿ ದೀಪಗಳನ್ನು ಸರಿಪಡಿಸಲು ಸೂಚಿಸಿದರು.

ಅಂತಿಮವಾಗಿ ವಾರ್ಡ್‌ನ ಎಲ್ಲಾ ವಾರ್ಡ್ ಕಮಿಟಿಯ ಸದಸ್ಯರಗಳ ಮತ್ತು ವಿವಿಧ ಸಂಘ ಸಂಸ್ಥೆಗಳು ಜೊತೆಗೂಡಿ ಸಮನ್ವಯ ಸಾಧಿಸಿ ಕುಂದು ಕೊರತೆಗಳನ್ನು ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಎಲ್ಲಾ ಅಧಿಕಾರಿ ವರ್ಗದವವರಿಗೆ ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಮುತ್ತುರಾಜ್)
ಮುಖ್ಯ ಲೆಕ್ಕ ಪರಿಶೋಧನಾಧಿಕಾರಿಗಳು
ಹಾಗೂ ನೋಡಲ್ ಅಧಿಕಾರಿ,
ವಾರ್ಡ್‌ನಂ.130, ಉಲ್ಲಾಳ
ಕೆಂಗೇರಿ ಉಪ ವಿಭಾಗ
ಬಿ.ಬಿ.ಎಂ.ಪಿ.,ಬೆಂಗಳೂರು.

ಪ್ರತಿಯನ್ನು:

1) ವಲಯ ಆಯುಕ್ತರು ಹಾಗೂ ವಿಶೇಷ ಆಯುಕ್ತರು(ಆಡಳಿತ) ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ತರಲು ಅವರ ಆಪ್ತ ಸಹಾಯಕರಿಗೆ ಸಲ್ಲಿಸಿದೆ.
2) ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆಂ.ಉ.ವಿ/ ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ(ಯಶವಂತಪುರ) ರವರ ಮಾಹಿತಿಗಾಗಿ ಕಳುಹಿಸಿದೆ.
6) ಎಲ್ಲಾ ವಾರ್ಡ್ ಕಮಿಟಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
7) ಕಛೇರಿ ಪ್ರತಿ

Scanned with CamScanner